ಕೇಮಿಲ್ಲದ ಪುರುಸೊತ್ತಿನ ಜನ ಅಲ್ಲಿಗೆ ಬರುತ್ತಿದ್ದರು. ಗಿರಾಕಿಗಳ ಮೈಮೇಲೆ ಕುಮಾರ ಟೇಪ್ ಅಡ್ಡಾಡಿಸಿ ಹೇಳುವ ಎಲ್ಲಾ ಅಳತೆಗಳನ್ನು ನಾನೊಂದು ಪುಸ್ತಕದಲ್ಲಿ ನೀಟಾಗಿ ಬರೆಯುತ್ತಿದ್ದೆ. ಹೆಣ್ಣು ಜೀವಗಳು ಅಳತೆ ಕೊಡಲು ಬಂದಾಗ ಕುಮಾರ ಮುಲಾಜಿಲ್ಲದೆ ನಮ್ಮನ್ನು ಹೊರಗೆ ದಬ್ಬುತ್ತಿದ್ದ. ಭೂಮಂಡಲವನ್ನು ಅಳತೆ ಮಾಡಿ ಮಿಗುವಷ್ಟು ಅಧಿಕ ಸಮಯವನ್ನೂ ಬಳಸಿಕೊಳ್ಳುತ್ತಿದ್ದ. ಈ ಬಗ್ಗೆ ನಮಗೆಲ್ಲಾ ಅತೀವ ಸಿಟ್ಟು ಆಕ್ರೋಶಗಳಿದ್ದವು. ಆತ ಅದನ್ನು ತನ್ನ ವೃತ್ತಿಧರ್ಮ ಎಂದರೂ ಒಪ್ಪದ ನಾವು ಮಿತ್ರದ್ರೋಹಿ ಎಂದು ಗೊಣಗಿಕೊಂಡು ತೆಪ್ಪಗಾಗುತ್ತಿದ್ದೆವು. ಹೆಂಗಳೆಯರ ಅಳತೆ ತೆಗೆಯುವಲ್ಲಿ ಆತನಿಗೊಂದು ಪುಳಕವಿತ್ತು. ಅದನ್ನಾತ ಸಂಭ್ರಮಿಸುತ್ತಿದ್ದ.

ಸಂಜೆಯ ಹೊತ್ತಿಗೆ ಬೇರೆಬೇರೆ ಕಡೆ ಕೆಲಸಕ್ಕೆ ಹೋದ ಗೆಳೆಯರೆಲ್ಲಾ ನೀಟಾಗಿ ಡ್ರೆಸ್ ಮಾಡಿಕೊಂಡು ಇಲ್ಲಿಗೆ ಠಳಾಯಿಸುತ್ತಿದ್ದರು. ವೆಲ್ಡಿಂಗ್ ಶಾಪಿನಲ್ಲಿ ಕೆಲಸ ಮಾಡುವ ಕಣ್ಣನ್ ಮದುಮಗನಂತೆ ಸಿಂಗಾರವಾಗಿ ಬರುತ್ತಿದ್ದ. ಕೆಲಸದ ಸಮಯದಲ್ಲಿ ಮುಸುಡಿಗೆ ಗ್ರೀಸು ಮೆತ್ತಿಕೊಂಡು, ಸುಟ್ಟಗಾಯದ ಸಾವಿರಾರು ತೂತುಗಳ ಜರಡಿ ಉಡುಪು ಧರಿಸಿದ್ದ ವ್ಯಕ್ತಿ ಇವನೇನಾ ಎಂದು ಸೋಜಿಗವಾಗುವಷ್ಟು ಆತ ಬದಲಾಗುತ್ತಿದ್ದ. ವಿಶೇಷ ಜಿಪ್ ಹಾಕಿಸಿ ಹೊಲಿಸಿದ ಉದ್ದನೆಯ ಶೂ ಜತೆಗೆ ಬಿಗಿಯಾದ ಗರಿಗರಿ ಬಟ್ಟೆ ಮೈಗಂಟಿರುತ್ತಿತ್ತು. ಸ್ನೋ, ಪೌಡರ್ ಮುಖಕ್ಕೆ ಬಾಚಿ ಬಳಕೊಂಡು ವಿಪರೀತ ಘಮದ ಸೆಂಟನ್ನು ತೋಳ ತೆಕ್ಕೆಗಳಿಗೆ ಸಿಂಪಡಿಸಿಕೊಂಡು ಆತ ತನ್ನದೇ ವೈಯ್ಯಾರದಲ್ಲಿ ಬಳುಕಾಡಿಕೊಂಡು ಬರುತ್ತಿದ್ದ. ಆತ ಬಂದರೆ ಅದು ಸಂಜೆಯ ಐದುಗಂಟೆಯ ಸಮಯ.

ಮತ್ತೊಬ್ಬ ಶಿವು ಎಂಬಾತ. ಆತನಪ್ಪ ಯಾವಾಗಲೂ ಅವನ ಅಳತೆ ಮೀರಿ ಬಟ್ಟೆ ಹೊಲಿಸುತ್ತಿದ್ದರು. ಕಡ್ಡಿಖ್ಯಾತನಾಗಿದ್ದ ಶಿವು ಬಟ್ಟೆಯೆಂಬ ಬಣವೆಯಲ್ಲಿ ಸಂಪೂರ್ಣ ಮುಳುಗಿರುತ್ತಿದ್ದ. ಹಾವು ಇಣುಕಿದಂತಿರುವ ಸಣ್ಣ ಮುಸುಡಿ ಮಾತ್ರದಿಂದ ಆತನೇ ಶಿವು ಎಂದು ಗುರುತಿಸಲು ಸಾಧ್ಯವಿತ್ತು. "ಲೋ... ಶಿವ್ಯಾ... ನಿಮ್ಮಪ್ಪನ ಅಂಗಿ ಹಾಕ್ಕೊಂಡು ಬಂದಿದ್ದೀಯಲ್ಲೋ!" ಎಂದು ನಾವೆಲ್ಲಾ ಕಿಚಾಯಿಸುತ್ತಿದ್ದೆವು. ಇಂತಹ ಚಿಲ್ಲರೆ ಹಂಗಿನ ಮಾತಿಗೆಲ್ಲಾ ಆತ ತಲೆ ಕೆಡಿಸಿಕೊಂಡವನಲ್ಲ. ಆದರೆ, ನಿಜವಾಗಿ ಶಿವು ಏನು ಕೆಲಸ ಮಾಡುತ್ತಿದ್ದ ಎಂದು ಯಾರಿಗೂ ಗೊತ್ತಿರಲಿಲ್ಲ. ಆತ ದುಡಿತಕ್ಕೆ ಹೋಗುವುದನ್ನು ಕಂಡವರಿರಲಿಲ್ಲ. ಆದರೂ ಆತ, "ನಾನು ಕೆಲಸದಲ್ಲಿ ತುಂಬಾ ಬ್ಯುಸಿ ಇದ್ದೀನಿ, ಒಂಚೂರು ಪುರುಸೊತ್ತಿಲ್ಲ. ಮೈಮುರಿದು ದುಡಿದು ಹೆಣಬಿದ್ದೋಗಿದೆ" ಎನ್ನುತ್ತಿದ್ದ. ನಾವು ಕಂಡಾಗೆಲ್ಲಾ ಅತ ಹರಟೆ ಕೊಚ್ಚುತ್ತಿದ್ದ. ಬೇಜಾನ್ ಬೇಕಾರ್ ಆಗಿರುತ್ತಿದ್ದ. ಆದರೆ, ಈ ಬಗ್ಗೆ ವಿಚಾರಿಸಿದರೆ ಆತ, "ಎಲ್ಲಾ ಕೆಲಸ ಮಾಡ್ತೀನಿ ಫ್ರೆಂಡ್. ನಂಗೆ ಗೊತ್ತಿಲ್ದೆ ಇರೋ ಕೆಲಸ ಈ ಪ್ರಪಂಚದಲ್ಲಿ ಯಾವುದಿದೆ? ಹೇಳು" ಎಂದು ತಿರುಗಿ ಪ್ರಶ್ನಿಸುತ್ತಿದ್ದ.

ಶಿವು ತನ್ನಪ್ಪನಿಗೆ ಅಡ್ಡ ಹೆಸರಿಟ್ಟಿದ್ದ. ಅವರಪ್ಪ ಕುಡಿದು ಮನೆಯಲ್ಲಿ ಮಾಡುವ ಅವತಾರಗಳ ತಮಾಷೆ ಮಾಡಿ ನಟಿಸಿ ತೋರಿಸುತ್ತಿದ್ದ. ಅವನ ಹಾಸ್ಯಪ್ರಜ್ಞೆ ಉನ್ನತ ಮಟ್ಟದ್ದಾಗಿತ್ತು. ತೂರಾಡಿಕೊಂಡು ನಡೆಯುವ ಅಪ್ಪನನ್ನು, "ಏಯ್ ಜಾಕಿಚಾನ್" ಎಂದು ರೇಗಿಸುತ್ತಿದ್ದ. ಟೈಲರ್ ಕುಮಾರ ತನ್ನಂಗಡಿಯಲ್ಲಿ ದಿನವಿಡೀ ಸುಮ್ಮನೆ ಕೂರುತ್ತಿದ್ದ ಶಿವುಗೆ ಸಣ್ಣಗೆ ತನ್ನ ಕೆಲಸ ಕಲಿಸತೊಡಗಿದ. ಖಾಲಿ ಇದ್ದ ಮಿಷನ್ನಿನ ಮೇಲೆ ಕೂರಿಸಿ ಸಣ್ಣಪುಟ್ಟ ತೇಪೆ ಕೆಲಸ, ರಫ್‌ವರ್ಕ್ ಮಾಡಿಸಿ ಕೊನೆಗೆ ಪೂರ್ಣ ಟೈಲರ್ ಮಾಡಿ ತನ್ನಲ್ಲೇ ಕೆಲಸ ಕೊಟ್ಟ. ಶಿವು ಆಗಲೇ ತನ್ನ ಮೈಯಳತೆಯ ಹೊಸ ಬಟ್ಟೆ ಹಾಕಿದ್ದು.

ರಾತ್ರಿ ಕಾವಲು ಕೆಲಸಕ್ಕೆ ಹೋಗುತ್ತಿದ್ದ ಮನ್ಸೂರ್ ಕೂಡ ಸಂಜೆ ಬಂದು ಹೋಗುತ್ತಿದ್ದ. ಆತ ತನ್ನ ಒರಟು ವರ್ತನೆಗೆ ಹೆಸರುವಾಸಿ. ಬರೀ ಹೊಡೆಯೋದು, ಬಡಿಯೋದು ಬಿಟ್ಟು ಆತ ಬೇರೆ ವಿಷಯಗಳನ್ನೇ ಮಾತಾಡುತ್ತಿರಲಿಲ್ಲ. ಗಂಟಲು ಕೂಡ ಅಷ್ಟೇ ದೊಡ್ಡದು. "ಈಗ ಯಾರನ್ನ